ಅಧ್ಯಕ್ಷರಾಗಿರುವುದು ನಿಜವಲ್ಲವೇ? ಪವಿತ್ರವಾದ ಬಸವಣ್ಣನವರ ಪುಣ್ಯ ಕ್ಷೇತ್ರವನ್ನು ಕಾಪಾಡುವುದಕ್ಕೋಸ್ಕರ ಸರ್ಕಾರ ಇದುವರೆಗೂ ಎಷ್ಟು ಹಣ ಖರ್ಚು ಮಾಡಿದೆ? ಇನ್ನು ಮುಂದೆ ಸದರಿ ಕೂಡಲ ಸಂಗಮ ಅಭಿವೃದ್ಧಿಗೆ ಎಷ್ಟು ಹಣ ಖರ್ಚು ಮಾಡಲು ಉದ್ದೇಶಿಸಿದೆ?

2. ಬೀದರ್ ಜಿಲ್ಲೆಯ ಬಸವ ಕಲ್ಯಾಣ ಬಸವಣ್ಣನವರ ಧರ್ಮ ಭೂಮಿಯಾಗಿದ್ದು, ಕೂಡಲ ಸಂಗಮದಷ್ಟು ಐತಿಹಾಸಿಕ ಮತ್ತು ಪುಣ್ಯ ಕ್ಷೇತ್ರವಾಗಿದ್ದು ಕೂಡಲ ಸಂಗಮ ಮಾದರಿಯಲ್ಲಿ ಪ್ರತ್ಯೇಕವಾಗಿ ಬಸವಕಲ್ಯಾಣದಲ್ಲಿ ಅಭಿವೃದ್ಧಿ ಪ್ರಾಧಿಕಾರವನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

3. ಹಾಗಿದ್ದರೆ ಇದರ ರೂಪರೇಷೆ ಹಾಗೂ ಯೋಜನೆಗಳು ಏನು? ವಿವರವಾಗಿ ಮಾಹಿತಿ ನೀಡುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1. ಬಿಜಾಪುರದಲ್ಲಿರುವ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿರುವುದು ನಿಜ. ಈ ಪ್ರಾಧಿಕಾರಕ್ಕೆ ಒಟ್ಟು ರೂ. 33.6 ಕೋಟಿಗಳು ಈಗಾಗಲೇ ಬಿಡುಗಡೆ ಆಗಿದ್ದು ಇದುವರೆಗೂ ರೂ. 16.48 ಕೋಟಿಗಳಷ್ಟು ಖರ್ಚು ಮಾಡಲಾಗಿದೆ. ಉಳಿದ ಹಣವನ್ನು ಈಗಾಗಲೇ ಅನುಮೋದಿತವಾಗಿರುವ ಕಾಮಗಾರಿಗಳಿಗೆ ಖರ್ಚು ಮಾಡಲು ಉದ್ದೇಶಿಸಿದೆ.

2. ಕಂದಾಯ ಇಲಾಖೆಗೆ ಈ ಪ್ರಸ್ತಾವನೆ ಸಂಬಂಧಿಸಿರುವುದಿಲ್ಲ.

3. ಅನ್ವಯಿಸುವುದಿಲ್ಲ.

ಬಸವಕಲ್ಯಾಣ ಟೌನ್‌ನಲ್ಲಿ ಅಗ್ನಿಶಾಮಕ ಠಾಣೆ

3258 - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಟೌನ್‌ನಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲಾಗುವುದೆ?

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಹೌದು.

ಆ) ಈ ಠಾಣೆಯನ್ನು ತೆರೆಯಲು ಕನಿಷ್ಟ ಸೌಲಭ್ಯಗಳು ದೊರಕಿದ ನಂತರ,

ತೆರೆಯಲಾಗುವುದು. ಈ ಠಾಣೆಯನ್ನು ತೆರೆಯಲು ಈ ಕೆಳಗೆ ನಮೂದಿಸಿರುವ ವೆಚ್ಚ ತಗಲುತ್ತದೆ.

ಆವರ್ತಕ	ಅನಾವರ್ತಕ
ರೂ. 12,38,000	ರೂ. 1,45,00,000

ಬೆಂಗಳೂರು ನಗರ ನೀರು ಸರಬರಾಜು

3259 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರು ನಗರ ತುಂಬಾ ಬೆಳೆಯುತ್ತಿದ್ದು ಅಸಮರ್ಪಕ ನೀರು ಸರಬರಾಜಿನಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ನೀರು ಸರಬರಾಜು ಉತ್ತಮಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

2. *ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಹೊಸದಾಗಿ ಕೆಳಮಟ್ಟದ ಜಲಾಶಯ (ಗ್ರೌಂಡ್ ಲೆವೆಲ್ ರಿಸರ್‌ವೈಯರ್) ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ? ಎಲ್ಲೆಲ್ಲಿ ಜಮೀನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ? ಎಷ್ಟು ವೆಚ್ಚದಲ್ಲಿ ಕಾಮಗಾರಿ ತೆಗೆದುಕೊಳ್ಳಲಾಗಿದೆ? ಯಾವ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ?*

3. *ಗುತ್ತಿಗೆ ಅಂತಿಮಗೊಳಿಸುವುದರಲ್ಲಿ ವಿಳಂಬವಾಗುತ್ತಿರುವುದು ನಿಜವೇ? ಹಾಗಿದ್ದಲ್ಲಿ ಕಾಮಗಾರಿ ಎಂದು ಪ್ರಾರಂಭಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

1. ಬಂದಿದೆ. ನೀರು ಸರಬರಾಜು ಉತ್ತಮಗೊಳಿಸಲು ಬೆಂಗಳೂರು ಜಲ ಮಂಡಲಿ ಅಂದಾಜು 1072.00 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ 4ನೇ ಹಂತದ ಮೊದಲನೆಯ ಘಟ್ಟದ ಯೋಜನೆಯನ್ನು ತೆಗೆದುಕೊಂಡಿದ್ದು ಇದರಿಂದ ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಬರಲಿದೆ. ಈ ಯೋಜನೆ ಮಾರ್ಚ್ 2002ದ ವೇಳೆಗೆ ಕಾರ್ಯಗತವಾಗುವ ನಿರೀಕ್ಷೆಯಿದೆ.

2. ಬೆಂಗಳೂರು ನಗರದಲ್ಲಿ ಆರು ಜಲಾಗಾರಗಳನ್ನು, ಅಂದರೆ, ಹೆಗ್ಗನಹಳ್ಳಿ, ಸಿಂಗಾಪುರ, ಜಿ.ಕೆ.ವಿ.ಕೆ., ಕೊತ್ತನೂರು ದಿಣ್ಣೆ, ಕೋಡಿ ಚಿಕ್ಕನಹಳ್ಳಿ, ಹೂಡಿಗಳಲ್ಲಿ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಮೇಲೆ ತಿಳಿಸಿರುವ ಎಲ್ಲಾ ಸ್ಥಳಗಳಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಅಂದಾಜು ರೂ. 41.74 ಕೋಟಿ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದ್ದು, ಈ ಕಾಮಗಾರಿಗಳನ್ನು ಮೆ : ಪೆಟ್ರಾನ್ ಸಿವಿಲ್ ಇಂಜಿನಿಯರಿಂಗ್ ವರ್ಕ್ಸ್ ಮತ್ತು ಎಲ್ ಅಂಡ್ ಟಿ ಸಂಸ್ಥೆಗಳಿಗೆ ಗುತ್ತಿಗೆ ಮೇರೆಗೆ ನೀಡಲಾಗಿದೆ.

3. ಇಲ್ಲ. ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.